**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಾಕ್ಷಿದಾರನ ಹೆಸರುಃ- ತೇಜವತಿ
ಗಂಡನ ಹೆಸರು ಃ- ಸೋಮಶೇಖರ
ವಯಸ್ಸು ಃ- 67 ವರ್ಷ
ಉದ್ಯೋಗ ಃ- ವ್ಯವಸಾಯ
ವಾಸ ಃ- ನಿಡಸಾಲೆ

**ಸಾಕ್ಷಿಗೆ ದಿಃ 12.02.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 09.04.2020 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗ ಆತ್ಮಾನಂದ ಮನೆಯ ಜಗಲಿ ಮೇಲೆ ಮಾತನಾಡುತ್ತಾ ಕುಳಿತಿರುವಾಗ ಗಲ್ಲಿ ವಿಚಾರವಾಗಿ ನಮಗೂ ಮತ್ತು ಆರೋಪಿತರ ನಡುವೆ ಗಲಾಟೆ ಆಗಿರುತ್ತದೆ. ದಿಃ 16.04.2020 ರಂದು ನಮಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಆರೋಪಿ 3 ನನ್ನ ಗಂಡನಿಗೆ ಕಲ್ಲಿನಿಂದ ಭುಜಕ್ಕೆ ಹೊಡೆದಿರುತ್ತಾರೆ. ಆರೋಪಿ 1 ನನಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಚಾಸಾ.5 ಮತ್ತು 6 ಜಗಳ ಬಿಡಿಸಿರುತ್ತಾರೆ. ನ್ಯಾಯಪಂಚಾಯತಿ ಸಹ ಆಗಿರುತ್ತದೆ. ನಾನು ಆರೋಪಿತರ ವಿರುದ್ದ ಹೇಳಿಕೆ ನೀಡಿರುತ್ತೇನೆ. ಚಾಸಾ.1 ಸಹ ಜಗಳ ಬಿಡಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಮತ್ತು ಮುಮ ಅನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 09.04.2020 ರಂದು ಬೆಳಗ್ಗೆ ಸುಮಾರು 9.00 ರ ಸಮಯದಲ್ಲಿ ಆರೋಪಿತರು ನನಗೆ ಎಳೆದಾಡಿ ಕೈಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ದಿಃ 16.04.2020 ರಂದು ಚಾಸಾ.1 ಗಲಾಟೆ ವಿಚಾರವಾಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಪಿ ಎಸ್ ವಕೀಲರಿಂದ

ಚಾಸಾ.1 ನನ್ನ ಸೊಸೆ. ಚಾಸಾ.3 ನನ್ನ ಗಂಡ ಇರುತ್ತಾರೆ. ನಮಗೂ ಮತ್ತು ಆರೋಪಿತರಿಗೂ ಇದೇ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣಗಳು ಇದ್ದು ನಾನು ದಾಖಲು ಮಾಡಿದ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ಸಿವಿಲ್ ಪ್ರಕರಣಗಳು ಇರುತ್ತವೆ ಎಂದರೆ ಸರಿಯಲ್ಲ. ದೂರನ್ನು ನನ್ನ ಸೊಸೆ ದಿಃ 05.06.2020 ರಂದು ನೀಡಿರುತ್ತಾರೆ. ಗಲಾಟೆ ಆದ ದಿನ ದೂರನ್ನು ನೀಡಲು ಯಾವುದೇ ತೊಂದರೆ ಇರಲಿಲ್ಲ. ಗಲಾಟೆ ಸಮಯದಲ್ಲಿ ಸುಮಾರು ಜನ ಸೇರಿದ್ದು ಜನರ ಸಂಖ್ಯೆ ಗೊತ್ತಿಲ್ಲ. ಆರೋಪಿತರು ನಮಗೆ ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮುಮ ರೀತ್ಯಾ ವಸ್ತುಗಳು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ನಮಗೂ ಮತ್ತು ಆರೋಪಿತರಿಗೂ ಜಮೀನು ವಿಚಾರವಾಗಿ ದ್ವೇಷ ಇದ್ದ ಕಾರಣ ಸುಳ್ಳು ದೂರನ್ನು ನೀಡಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ದೊಣ್ಣೆ ಮತ್ತು ಕಲ್ಲಿನಿಂದ ಹೊಡೆದಿಲ್ಲ ಒಂದು ವೇಳೆ ಹೊಡೆದಿದ್ದಲ್ಲಿ ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಸ್ಥಳಕ್ಕೆ ಬಂದು ಪೋಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ಆರೋಪಿತರಿಗೂ ಘಟನೆಗೂ ಸಂಬಂದ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಕುಣಿಗಲ್.